ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 25-06-1970

***ವ್ಯಕ್ತ ಮತ್ತು ಅವ್ಯಕ್ತ ವತನದ ಭಾಷೆಯಲ್ಲಿ ಅಂತರ***

(व्यक्त और अव्यक्त वतन की भाषा में अंतर)

ವ್ಯಕ್ತದಲ್ಲಿರುತ್ತಾ ಅವ್ಯಕ್ತ ವತನದ ಭಾಷೆಯನ್ನೂ ತಿಳಿಯಬಲ್ಲಿರಾ? ಅವ್ಯಕ್ತ ವತನದ ಭಾಷೆ ಯಾವುದಾಗಿದೆ? ಎಂದಾದರೂ ಅವ್ಯಕ್ತ ವತನದ ಭಾಷೆಯನ್ನು ಕೇಳಿರುವಿರಾ? ಈಗ ಅವ್ಯಕ್ತನಿಗೆ ವ್ಯಕ್ತ ಲೋಕದ ನಿವಾಸಿಗಳಿಗಾಗಿ ವ್ಯಕ್ತ ಆಧಾರ ಪಡೆದು ವ್ಯಕ್ತದಂತೆ ಮಾತನಾಡಬೇಕಾಗುತ್ತದೆ. ಅವ್ಯಕ್ತ ವತನದಲ್ಲಿ ಒಂದು ಕ್ಷಣದಲ್ಲಿ ಬಹಳ ರಹಸ್ಯ ಸ್ಪಷ್ಟವಾಗುತ್ತದೆ. ತಮ್ಮ ಈ ಜಗತ್ತಿನಲ್ಲಿ ಬಹಳಷ್ಟು ಮಾತನಾಡಿದ ಮೇಲೆ ಸ್ಪಷ್ಟವಾಗುತ್ತದೆ. ಇದಾಗಿದೆ ಅಂತರ, ಇಂದು ಬಾಪ್ ದಾದಾ ಏನನ್ನು ನೋಡುತ್ತಿದ್ದಾರೆ ಎಂಬುದನ್ನು ವ್ಯಕ್ತ ಭಾಷೆ ಮತ್ತು ಅವ್ಯಕ್ತ ಬಾಪ್ ದಾದಾರ ಸಂಕೇತಗಳಿಂದ ತಿಳಿಯಬಲ್ಲಿರಾ? ವಿಜ್ಞಾನದ ಮುಖಾಂತರ ಎಲ್ಲೆಲ್ಲಿಯವೋ ಮಾತುಗಳನ್ನು, ದೃಶ್ಯಗಳನ್ನು ಗ್ರಹಿಸುತ್ತೀರೋ ಹಾಗೆ ತಾವು ಅವ್ಯಕ್ತ ಸ್ಥಿತಿಯ ಆಧಾರದಿಂದ ಸಮ್ಮುಖದಲ್ಲಿ ಮಾತುಗಳನ್ನು ಗ್ರಹಿಸಲು ಆಗುವುದಿಲ್ಲವೇ? ಯಾವ ಮೂರು ಮಾತುಗಳನ್ನು ನೋಡುತ್ತಿದ್ದೇವೆ? ಬಾಪ್ ದಾದಾ ಇಂದು ಪ್ರತಿಯೊಬ್ಬರೂ ಎಲ್ಲಿಯವರೆಗೆ ಪರೀಕ್ಷಿಸುವವರಾಗಿದ್ದೀರಿ ಮತ್ತು ಎಲ್ಲಿಯವರೆಗೆ ನಿರ್ಮಾಣ(ಮೇಕರ್) ಮಾಡುವವರು ಆಗಿರುವಿರಿ ಎಂಬುದನ್ನು ನೋಡುತ್ತಿದ್ದರು. ಯಾರು ಎಷ್ಟು ಚೆಕರ್ ಆಗಿರುವರೋ ಅಷ್ಟೇ ಮೇಕರ್ ಆಗುವರು. ಈ ಸಮಯ ತಾವು ನಿಯಮ ತಯಾರು ಮಾಡುವರು ಆಗಿದ್ದೀರಿ. ಹೊಸ ಜಗತ್ತನ್ನು ರೂಪಿಸುವವರು ಮತ್ತು ಶಾಂತಿ ಸ್ಥಾಪಕರು ಆಗಿದ್ದೀರಿ. ಆದರೆ ಮಾಡುವುದರ (maker) ಜೊತೆಗೆ ಅವಶ್ಯವಾಗಿ ಪರಿಶೀಲಿಸುವವರು (ಚೆಕರ್) ಆಗಬೇಕು. ವಿಶೇಷ ಏನನ್ನು ಪರಿಶೀಲಿಸಬೇಕು? ಯಾವುದರಿಂದ ಪ್ರಸಿದ್ಧಿಯಾಗುವುದೋ ಅದೇ ಸೇವೆ ಈಗ ಉಳಿದಿದೆ. ಪರಿಶೋಧನೆ ಮಾಡುವವರು ಅಲ್ಲಿ ಏನನ್ನು ಪರೀಕ್ಷಿಸುತ್ತಾರೆ? ಕಲಬೆರಕೆ ಮಾಡುವವರ ಬಳಿಗೆ ತಾವು ಸರ್ವೋಚ್ಚ ಸರಕಾರದ ಪರಿಶೋಧಕರಾಗಿ ಹೋಗಿ. ಹೇಗೆ ಆ ಸರಕಾರದ ಪರೀಕ್ಷಕರು ತಮ್ಮ ರಹಸ್ಯವನ್ನು ಹೇಳುವುದಿಲ್ಲವೋ, ಅದೇ ರೀತಿ ಪಾಂಡವ ಸರಕಾರದ ಅಧಿಕಾರದಿಂದ ಪರಿಶೋಧಕರಾಗಿ ಹೋಗಿ ತಮ್ಮನ್ನು ನೋಡುತ್ತಲೇ ತಮ್ಮ ಲಂಚ, ಕಲಬೆರಕೆಯಿಂದ ಭಯ ಪಟ್ಟು ತಲೆ ಬಾಗಿಸುವರು. ಈಗ ಈ ಸೇವೆ ಉಳಿದಿದೆ. ಇದರಿಂದಲೇ ಪ್ರಸಿದ್ಧಿಯಾಗುವುದು, ಒಬ್ಬರಾದರೂ ತಲೆ ಬಾಗಿಸಿದರೆ ಅನೇಕರ ತಲೆ ಬಾಗುವುದು ಪಾಂಡವ ಸರಕಾರದ ಅಧಿಕಾರಿಗಳಾಗಿ ಹೋಗಿ ಗರ್ಜನೆ ಮಾಡಬೇಕು. ಈಗ ತಿಳಿಯಿತೇ? ತಮ್ಮ ಹಾಗೂ ಸೇವೆಯ ಪರೀಕ್ಷಕರಾಗಬೇಕು. ಯಾರು ಎಷ್ಟು ಪರೀಕ್ಷಕರು ಹಾಗೂ ನಿರ್ಮಾಣಕರ್ತರು ಆಗುವರೋ ಅವರೇ ನಂತರ ಆಳುವವರಾಆಗುತ್ತಾರೆ . ಆದ್ದರಿಂದ ಎಷ್ಟು ಪರೀಕ್ಷಕರು ಮತ್ತು ನಿರ್ಮಾಣಕರ್ತರು ಹಾಗೂ ಆಳುವವರು ಆಗಿರುವಿರಿ? (checker-maker-ruler) ಈ ಎಲ್ಲಾ ಮಾತುಗಳನ್ನು ಒಬ್ಬೊಬ್ಬರಲ್ಲಿ ನೋಡುತ್ತಿದ್ದೇವೆ. ಯಾವಾಗ ತಮ್ಮನ್ನು ಈ ಮೂರು ಸ್ಥಿತಿಗಳಲ್ಲಿ ಸ್ಥಿತ ಮಾಡಿಕೊಳ್ಳುವಿರೋ ಆಗ ಸಣ್ಣಪುಟ್ಟ ಮಾತುಗಳಲ್ಲಿ ಸಮಯ ಹೋಗುವುದಿಲ್ಲ. ಬೇರೆಯವರ ಲಂಚ, ಕಲಬೆರಕೆಯನ್ನು ಪರಿಶೀಲನೆ ಮಾಡುವವರು ಎಂದ ಮೇಲೆ ತಮ್ಮ ಬಳಿ ಅವುಗಳು ಇರಲು ಸಾಧ್ಯವೇ? ನಾವು ಈ ಮೂರು ಸ್ಥಿತಿಗಳಲ್ಲಿ ಎಷ್ಟು ಇರಲು ಸಾಧ್ಯ ಎಂಬ ನಶೆ ಇರಬೇಕು. ಆಳುವವರು ಯಾರ ಅಧೀನತೆಯಲ್ಲಿಯೂ ಇರುವುದಿಲ್ಲ, ಅಧಿಕಾರಿಗಳಾಗಿರುತ್ತಾರೆ. ಎಂದಿಗೂ, ಯಾರ ಅಧೀನದಲ್ಲಿ ಇರುವುದಿಲ್ಲವಾದರೆ ಮಾಯೆಗೆ ಹೇಗೆ ಅಧೀನರು? ಅಧಿಕಾರವನ್ನು ಮರೆಯುವುದರಿಂದ ಅಧಿಕಾರಿಯೆಂದು ತಿಳಿಯುವುದಿಲ್ಲ. ಅಧಿಕಾರಿಯೆಂದು ತಿಳಿಯದೇ ಇರುವುದರಿಂದ ಅಧೀನರಾಗುತ್ತೀರಿ. ಎಷ್ಟು ಅಧಿಕಾರಿ ಎಂದು ತಿಳಿಯುವಿರೋ ಅಷ್ಟು ಅವಶ್ಯವಾಗಿ ಉದಾರ ಚಿತ್ತರಾಗುವಿರಿ. ಎಷ್ಟು ಉದಾರಚಿತ್ತರಾಗುವಿರೋ ಅಷ್ಟು ಅನೇಕರಿಗೆ ಉದಾಹರಣಾ ಸ್ವರೂಪರಾಗುವಿರಿ. ಉದಾರಚಿತ್ತರಾಗಲು ಅಧಿಕಾರಿಗಳಾಗಬೇಕು. ಅಧಿಕಾರಿ ಎಂಬುದರ ಅರ್ಥವೇ ಆಗಿದೆ ಸದಾ ಅಧಿಕಾರ ನೆನಪಿರುವುದು. ಬಾಪ್ ದಾದಾ ಹೇಗೆ ಉದಾಹರಣಾ ಸ್ವರೂಪರಾದರೋ

ಹಾಗೆಯೇ ತಾವೂ ಸಹ ಅನೇಕರಿಗೆ ಉದಾಹರಣಾ ಸ್ವರೂಪರಾಗುವಿರಿ. ಉದಾರಚಿತ್ತರಾಗಿ ಇರುವವರು ಉದಾಹರಣೆಯಾಗುತ್ತಾರೆ ಮತ್ತು ಸಹಜವಾಗಿ ಅನೇಕರ ಉದ್ಧಾರ ಮಾಡಬಲ್ಲರು (ಉದಾರಚಿತ್ತ-ಉದಾಹರಣೆ- ಉದ್ಧಾರ), ತಿಳಿಯಿತೇ?

ಯಾರಲ್ಲಾದರೂ ಮಾಯೆ ಪ್ರವೇಶವಾಗುವಾಗ ಮೊದಲು ಯಾವ ರೂಪದಲ್ಲಿ ಪ್ರವೇಶವಾಗುತ್ತದೆ? (ಪ್ರತಿಯೊಬ್ಬರೂ ತಮ್ಮ ವಿಚಾರವನ್ನು ಹೇಳಿದರು) ಮೊದಲು ಮಾಯೆ ಭಿನ್ನ ಭಿನ್ನ ರೂಪದಲ್ಲಿ ಆಲಸ್ಯವನ್ನು ತರುತ್ತದೆ. ದೇಹ ಅಭಿಮಾನದಲ್ಲಿ ಆಲಸ್ಯದ ಮೊದಲ ರೂಪವನ್ನು ಧಾರಣೆ ಮಾಡುತ್ತದೆ. ಆ ಸಮಯದಲ್ಲಿ ಶ್ರೀಮತಕ್ಕೆ ಹೊಂದಾಣಿಕೆ ಆಗಲು ಆಲಸ್ಯ ಅಡ್ಡ ಬರುತ್ತದೆ, ನಂತರ ದೇಹಾಭಿಮಾನ ಹೆಚ್ಚಾಗುತ್ತದೆ ಮತ್ತು ಎಲ್ಲಾ ಮಾತುಗಳಲ್ಲಿ ಭಿನ್ನಭಿನ್ನ ರೂಪದಿಂದ ಮೊದಲು ಆಲಸ್ಯ ಬರುತ್ತದೆ. ಆಲಸ್ಯ, ಸುಸ್ತು ಮತ್ತು ಉದಾಸೀನತೆ ಈಶ್ವರೀಯ ಸಂಬಂಧದಿಂದ ದೂರ ಮಾಡುತ್ತದೆ. ಸಾಕಾರ ಸಂಬಂಧದಿಂದ ಅಥವಾ ಬುದ್ಧಿಯ ಸಂಬಂಧದಿಂದ ಅಥವಾ ಸಹಯೋಗ ಪಡೆಯುವ ಸಂಬಂಧದಿಂದ ದೂರ ಮಾಡುತ್ತದೆ. ಈ ಸುಸ್ತು ಬಂದ ಮೇಲೆ ಯಾವ ವಿಕರಾಳ ರೂಪವಿರುತ್ತದೆ? ದೇಹ ಅಹಂಕಾರದಲ್ಲಿ ಪ್ರತ್ಯಕ್ಷ ರೂಪದಲ್ಲಿ ಬರುತ್ತಾರೆ. ಮೊದಲು ಆರನೆಯ ವಿಕಾರದಿಂದ ಶುರುವಾಗುತ್ತದೆ. ಜ್ಞಾನಿ ಆತ್ಮರಾದ ಮಕ್ಕಳಲ್ಲಿ ಕೊನೆಯದಾದ ಸುಸ್ತಿನ ರೂಪದಿಂದ ಶುರುವಾಗುವುದು. ಸುಸ್ತಾದಾಗ ಎಂತಹ ಸಂಕಲ್ಪಗಳು ಬರುವವು?ವರ್ತಮಾನ ಇದೇ ರೂಪದಲ್ಲಿ ಮಾಯೆಯ ಪ್ರವೇಶತೆಯಾಗುತ್ತದೆ. ಇದರ ಕಡೆಗೆ ಬಹಳ ಗಮನ ಕೊಡಬೇಕು. ಈ ಆರನೆಯ ರೂಪದಲ್ಲಿ ಮಾಯೆ ಭಿನ್ನಭಿನ್ನ ಪ್ರಕಾರದಿಂದ ಬರುವ ಪ್ರಯತ್ನ ಮಾಡುತ್ತದೆ. ಸುಸ್ತಿನ ರೂಪಗಳೂ ಭಿನ್ನ ಭಿನ್ನವಾಗಿವೆ. ಶಾರೀರಿಕ, ಮಾನಸಿಕ, ಎರಡೂ ಸಂಬಂಧಗಳಲ್ಲಿ ಮಾಯೆ ಬರಬಹುದು. ಅನೇಕರು ಈಗಿಲ್ಲದಿದ್ದರೆ ಮತ್ತೆ ಯಾವಾಗಲಾದರೂ ಮಾಡೋಣವೆಂದು ಯೋಚಿಸುತ್ತಾರೆ, ಗಡಿಬಿಡಿಯೇನಿದೆ ಈ ರೀತಿಯಾಗಿ ಬಹಳ ರಾಯಲ್ ರೂಪದಿಂದ ಮಾಯೆ ಬರುತ್ತದೆ. ಇನ್ನೂ ಕೆಲವರು ಅವ್ಯಕ್ತ ಸ್ಥಿತಿ ಈ ಪುರುಷಾರ್ಥಿ ಜೀವನದಲ್ಲಿ 6-8 ಗಂಟೆಗಳವರೆಗೆ ಆಗುವುದು ಹೇಗೆ ಸಾಧ್ಯ. ಇದು ಅಂತಿಮದಲ್ಲಿ ಆಗುವುದು. ಇದೂ ಸಹ ಸುಸ್ತಿನ ರಾಯಲ್ ರೂಪವಾಗಿದೆ. ನಂತರ ಮಾಡುತ್ತೇನೆ, ಯೋಚಿಸುತ್ತೇನೆ, ನೋಡುತ್ತೇನೆ ಇವೆಲ್ಲವೂ ಸುಸ್ತಾಗಿದೆ. ಈಗ ಇದರ ಪರಿಶೀಲಕರಾಗಿ, ಯಾರನ್ನೂ ಮಾಯೆ ರಾಯಲ್ ರೂಪದಲ್ಲಿ ಹಿಂದಕ್ಕೆ ಸರಿಸುತ್ತಿಲ್ಲ ತಾನೆ? ಪ್ರವೃತ್ತಿಯ ಪಾಲನೆಯನ್ನಂತೂ ಮಾಡಲೇಬೇಕು. ಆದರೆ ಪ್ರವೃತ್ತಿಯಲ್ಲಿದ್ದು ವೈರಾಗ್ಯ ವೃತ್ತಿಯಲ್ಲಿರಬೇಕು, ಇದು ಮರೆತು ಹೋಗುತ್ತದೆ. ಅರ್ಧ ಮಾತು ನೆನಪಿರುತ್ತದೆ. ಇನ್ನರ್ಧ ಬಿಟ್ಟು ಬಿಡುತ್ತೀರಿ. ಬಹಳ ಸೂಕ್ಷ್ಮ ಸಂಕಲ್ಪ ರೂಪದಲ್ಲಿ ಮೊದಲು ಸುಸ್ತು ಪ್ರವೇಶ ಮಾಡುತ್ತದೆ. ಆಮೇಲೆ ದೊಡ್ಡ ರೂಪ ತೆಗೆದುಕೊಳ್ಳುತ್ತದೆ.

ಒಂದು ವೇಳೆ ಅದೇ ಸಮಯದಲ್ಲಿ ಅದನ್ನು ತೆಗೆದುಬಿಟ್ಟರೆ ಹೆಚ್ಚು ಎದುರಿಸಬೇಕಾಗಿಲ್ಲ. ಆದ್ದರಿಂದ ಈಗ ತೀವ್ರ ಪುರುಷಾರ್ಥಿಯಾಗಲು ಅಥವಾ ಮುಂದುವರೆಯಲು ಯಾವ ರೂಪದಲ್ಲಿ ಮಾಯೆ ಸುಸ್ತು ಮಾಡುತ್ತದೆ ಎಂಬುದನ್ನು ಪರಿಶೀಲನೆ ಮಾಡಬೇಕು. ಮಾಯೆಯ ಹೊರ ರೂಪವನ್ನು ಪರಿಶೀಲನೆ ಮಾಡುತ್ತೀರಿ ಆದರೆ ಈ ರೂಪವನ್ನು ಪರಿಶೀಲನೆ ಮಾಡಬೇಕು. ನಿಗದಿಯಾದ ಸ್ಥಾನಗಳು ಕಡಿಮೆ ಇವೆ ಎಂದು ಕೆಲವರು ಯೋಚಿಸುತ್ತಾರೆ. ಬೇರೆಯವರನ್ನು ಪುರುಷಾರ್ಥದಲ್ಲಿ ಮುಂದಿರುವುದನ್ನು ನೋಡಿ ನಾವು ಇಷ್ಟು ಮುಂದೆ ಹೋಗಲು ಸಾಧ್ಯವಿಲ್ಲವೆಂದು, ಇಷ್ಟೇ ಸರಿ ಎಂದು ಯೋಚಿಸುತ್ತೀರಿ. ಇದೂ ಸಹ ಸುಸ್ತಿನ ರೂಪವಾಗಿದೆ. ಆದ್ದರಿಂದ ಈ ಎಲ್ಲಾ ಮಾತುಗಳಲ್ಲಿ ತಮ್ಮನ್ನು ತಾವು ಪರಿವರ್ತನೆ ಮಾಡಬೇಕು, ಆಗಲೇ ಲಾ ಮೇಕರ್ಸ್ (ಕಾನೂನು ನಿರ್ಮಾಪಕರು) ಅಥವಾ ಶಾಂತಿ ಸ್ಥಾಪನೆ ಮಾಡುವವರು ಅಥವಾ ಹೊಸ ವಿಶ್ವ ಸ್ಥಾಪನೆ ಮಾಡುವವರು ಎಂದು ಹೇಳಲಾಗುತ್ತದೆ. ಮೊದಲು ತಾವು ತಮ್ಮನ್ನು ಹೊಸಬರನ್ನಾಗಿ ಮಾಡಿಕೊಳ್ಳದಿದ್ದರೆ ಹೊಸ ವಿಶ್ವ ಸ್ಥಾಪಕರು ಹೇಗೆ ಆಗುವಿರಿ? ಮೊದಲು ತಮ್ಮನ್ನು ಮಾಡಿಕೊಳ್ಳಬೇಕಲ್ಲವೇ? ಪುರುಷಾರ್ಥದಲ್ಲಿ ತೀವ್ರತೆಯನ್ನು ತರುವ ವಿಧಿ ಗೊತ್ತಿದೆ. ಹಾಗಾದರೆ ಅದರಲ್ಲಿ ಏಕೆ ನಿಲ್ಲುವುದಿಲ್ಲ. ತಮ್ಮೊಂದಿಗೆ ತಾವೇ ಏನಾದರೂ ಪ್ರತಿಜ್ಞೆ ಮಾಡಿಕೊಳ್ಳದಿದ್ದರೆ ಅಲ್ಲಿಯವರೆಗೆ ಪರಿಪಕ್ವತೆ ಬರುವುದಿಲ್ಲ, ಎಲ್ಲಿಯವರೆಗೆ ಇಲ್ಲಿ ನಿಗದಿ ಪಡಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅಲ್ಲಿಯ ಸೀಟ್ ನಿಗದಿಯಾಗುವುದಿಲ್ಲ. ಹಾಗಾದರೆ ಪುರುಷಾರ್ಥದಲ್ಲಿ ತೀವ್ರತೆಯನ್ನು ಯಾವಾಗ ತರುವಿರಿ ಎಂದು ಈಗ ಹೇಳಿ? (ಈಗಿನಿಂದಲೇ) ಸಂಗ್ರಹಾಲಯದಲ್ಲಿ ಅಥವಾ ಪ್ರದರ್ಶನಿಯಲ್ಲಿ ಹೇಳುವ ಸ್ಲೋಗನ್

ಎಲ್ಲರಿಗೂ ಹೇಳುತ್ತೀರಲ್ಲವೇ 'ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲವೆಂದು ಅದನ್ನು ತಮಗಾಗಿ ನೆನಪಿಟ್ಟುಕೊಳ್ಳಿ ಯಾವಾಗಲಾದರೂ ಮಾಡುವೆವು ಎಂದು ಯೋಚಿಸಬೇಡಿ. ಈಗಲೇ ಆಗಿ ತೋರಿಸಿ. ಎಷ್ಟು ಪ್ರತಿಜ್ಞೆಯನ್ನು ಮಾಡುವಿರೋ ಅಷ್ಟು ಪರಿಪಕ್ವತೆ ಅಥವಾ ಸಾಹಸ ಬರುವುದು ಮತ್ತು ನಂತರ ಸಹಯೋಗವೂ ಸಿಗುವುದು. ತಾವೆಲ್ಲ ಹಳಬರಾಗಿದ್ದೀರಿ. ಆದ್ದರಿಂದ ಮುಂದಿರಿಸಿಕೊಂಡು ತಿಳಿಹೇಳುತ್ತಿದ್ದೇವೆ.

ಮುಂದೆ ಯಾರನ್ನು ಇರಿಸಿಕೊಳ್ಳಲಾಗುತ್ತದೆ? ಸ್ನೇಹಿಯಾದವರನ್ನು, ಸ್ನೇಹಿಯಾದವರಿಗೆ ಹೇಳಲು ಯಾವ ಸಂಕೋಚವಾಗುವುದಿಲ್ಲ. ಒಬ್ಬೊಬ್ಬರು ಈ ರೀತಿಯ ಸ್ನೇಹಿಯಾಗಿದ್ದಾರೆ. ತಂದೆ ಜೋರಾಗಿ ಏಕೆ ಮಾತನಾಡುವುದಿಲ್ಲ ಎಂದು ಯೋಚಿಸುತ್ತೀರಾ? ಬಹಳ ಸಮಯದ ಸಂಸ್ಕಾರದಿಂದ ಅವ್ಯಕ್ತ ರೂಪದಿಂದ ವ್ಯಕ್ತದಲ್ಲಿ ಬರುತ್ತಿದ್ದಾರೆ. ಆದ್ದರಿಂದ ಶಬ್ದದಲ್ಲಿ ಬರುವುದು ಸರಿಯೆನಿಸುವುದಿಲ್ಲ. ತವೂ ನಿಧಾನವಾಗಿ ಶಬ್ದದಿಂದ ದೂರ ಸಂಕೇತಗಳ ಮುಖಾಂತರ ವ್ಯವಹಾರ ಮಾಡಬೇಕು, ತಿಳಿಯಿತೇ? ಬಾಪ್ ದಾದಾ ಬುದ್ಧಿಯ ಡ್ರಿಲ್ ಮಾಡಿಸಲು ಬರುತ್ತಾರೆ, ಅದರಿಂದ ಪರೀಕ್ಷಿಸುವ ಮತ್ತು ದೂರದೇಶಿಯಾಗುವ ಯೋಗ್ಯತೆ ಪ್ರತ್ಯಕ್ಷ ರೂಪದಲ್ಲಿ ಬರುತ್ತವೆ ಏಕೆಂದರೆ ಮುಂದೆ ದೂರಾದೇಶಿ ಬುದ್ಧಿ ಮತ್ತು ನಿರ್ಣಯಶಕ್ತಿಯ(need to check) ಆವಶ್ಯಕತೆಯಿರುವ ಸೇವೆಯಿರುವುದು. ಆದ್ದರಿಂದ ಡ್ರಿಲ್ ಮಾಡಿಸುತ್ತಿದ್ದೇವೆ. ನಂತರ ಶಕ್ತಿಶಾಲಿಯಾಗುವಿರಿ. ಡ್ರಿಲ್ ನಿಂದ ಶರೀರವೂ ಶಕ್ತಿಶಾಲಿ ಆಗುವುದು. ಆದ್ದರಿಂದ ಈ ಬುದ್ಧಿಯ ಡ್ರಿಲ್ ನಿಂದ ಬುದ್ಧಿಯು ಶಕ್ತಿಶಾಲಿಯಾಗುವುದು. ಎಷ್ಟೆಷ್ಟು ತಮ್ಮ ಸ್ಥಾನವನ್ನು ನಿಗದಿಗೊಳಿಸಿಕೊಳ್ಳುವಿರೋ ಅಷ್ಟು ತಮ್ಮ ಲೌಕಿಕ ಕಾರ್ಯವನ್ನೂ ನಿಗದಿಗೊಳಿಸಿ ಕೊಳ್ಳುವಿರಿ. ಎರಡೂ ಲಾಭಗಳಿವೆ. ಎಷ್ಟು ಬುದ್ಧಿ ಸ್ಥಿರವೋ ಅಷ್ಟು ಕಾರ್ಯಕ್ರಮಗಳೂ ನಿಶ್ಚಿತವಾಗುವವು. ಕಾರ್ಯಕ್ರಮ ನಿಶ್ಚಿತವಾದರೆ ಪ್ರಗತಿ ನಿಶ್ಚಿತ. ಪ್ರಗತಿ ಅಲುಗಾಡಿದರೆ ಕಾರ್ಯಕ್ರಮಗಳು ಅಲುಗಾಡುತ್ತವೆ. ಈಗ ನಿಶ್ಚಿತಗೊಳಿಸುವುದನ್ನು ಕಲಿತುಕೊಳ್ಳಿ, ಈಗ ಸಂಪೂರ್ಣರಾಗಿ ಬೇರೆಯವರನ್ನು ಸಂಪೂರ್ಣ ಮಾಡುವುದು ಉಳಿದಿದೆ. ಯಾರು ಆಗುತ್ತಾರೋ ಅವರು ಪ್ರಮಾಣವನ್ನು ಕೊಡುತ್ತಾರೆ. ಈಗ ಮಾಡುವ ಪ್ರಮಾಣವನ್ನು ಕೊಡಬೇಕು. ಇನ್ನುಳಿದ ಈ ಕಾರ್ಯಕ್ಕಾಗಿ ವ್ಯಕ್ತ ದೇಶದಲ್ಲಿರಬೇಕು. ಒಳ್ಳೆಯದು.

ಅವ್ಯಕ್ತ ಮುರಳಿ 25-06-1970.

***ವ್ಯಕ್ತ ಮತ್ತು ಅವ್ಯಕ್ತ ವತನದ ಭಾಷೆಯಲ್ಲಿ ಅಂತರ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನನ್ನ ಅವ್ಯಕ್ತ ಸ್ಥಿತಿಯಿಂದ ನನ್ನ ಸಮ್ಮುಖದಲ್ಲಿರುವ ವಿಷಯಗಳನ್ನು ಗ್ರಹಿಸಿದ್ದೇನೆ.

2. ನಾನು ಕಾನೂನು ನಿರ್ಮಾಪಕನು (ಲಾ ಮೇಕರ್), ಹೊಸ ಪ್ರಪಂಚದ ನಿರ್ಮಾಪಕನು, ಶಾಂತಿದೂತನು.

3. ನಾನು ಸ್ವಯಂ ಮತ್ತು ಸೇವೆಯಲ್ಲಿ ಪರೀಕ್ಷಕನಾಗಿ, ನಿರ್ಮಾಣ ಕರ್ತನಾಗಿ, ಆಳುವವನಾಗಿ ಸಮಯವನ್ನು ಸಂಪೂರ್ಣವಾಗಿ ವಿನಿಯೋಗಿಸಿಕೊಂಡಿದ್ದೇನೆ.

4. ನಾನು ಅನೇಕರನ್ನು ಸಹಜವಾಗಿ ಉದ್ಧರಿಸಿ. ಉದಾಹರಣೆಯಾದ ಉದಾರಚಿತ್ತ ಸ್ವರೂಪ.

5. ನಾನು ಕುಟುಂಬವನ್ನು ಪಾಲನೆ ಮಾಡುತ್ತಾ ವೈರಾಗ್ಯವೃತ್ತಿಯಲ್ಲಿ ಇದ್ದೇನೆ.

6. ನಾನು ನನ್ನ ಪರಿಶೀಲನೆಯಿಂದ ಎಲ್ಲಾ ವಿಷಯಗಳನ್ನು ಪರಿವರ್ತನೆ ಮಾಡಿಕೊಂಡು ಲಾ ಮೇಕರ್ ಅಥವಾ ಹೊಸ ವಿಶ್ವದ ನಿರ್ಮಾಣ ಕರ್ತನಾಗಿದ್ದೇನೆ.

7. ನಾನು 'ಈಗಲೇ' ಎಂಬ ಪಾಠವನ್ನು ಧಾರಣೆ ಮಾಡಿರುವ ಪರಿಪಕ್ವ ಸ್ವರೂಪ.

8. ನಾನು ತಂದೆಯ ಸಮಾನ ಮಾತಿಗೆ ಅತೀತವಾಗಿ ಸಂಕೇತಗಳಿಂದ ಕಾರ್ಯ ವ್ಯವಹಾರಗಳನ್ನು ನಡೆಸುವ ಅವ್ಯಕ್ತ ವತನದ ಸಂಸ್ಕಾರಧಾರಿ.

9. ನಾನು ಬುದ್ಧಿಯ ವ್ಯಾಯಾಮದಿಂದ ಬುದ್ಧಿಯನ್ನು ಶಕ್ತಿಶಾಲಿಯಾಗಿಸಿಕೊಂಡು ನನ್ನ ಸೀಟನ್ನು, ಸಮಯವನ್ನು, ಕುಟುಂಬ ಕಾರ್ಯವನ್ನು ನಿರ್ಣಯಿಸಿಕೊಂಡು ಉನ್ನತಿಯನ್ನು ಪಡೆದಿದ್ದೇನೆ.

10. ನಾನು ವ್ಯಕ್ತ ದೇಶದಲ್ಲಿರುತ್ತಾ ಸಂಪೂರ್ಣವಾಗಿ ತಯಾರಾಗಿ ಎಲ್ಲರನ್ನೂ ಸಂಪೂರ್ಣವಾಗಿ ತಯಾರು ಮಾಡಿರುವ ಉದಾಹರಣಾ ಸ್ವರೂಪ.